# ಕೃಷ್ಣನ ಕೊಳಲು

ಕೊಡಗು ಜಿಲ್ಲೆಯ ಅಯ್ಯಂಗೇರಿ ಗ್ರಾಮದಲ್ಲಿ ವರ್ಷಕ್ಕೊಂದು ಬಾರಿ ಶ್ರೀಕೃಷ್ಣನ ಕೊಳಲನ್ನು ಪೂಜಿಸಲಾಗುತ್ತಿದೆ. ದ್ವಾಪರಯುಗದಲ್ಲಿ ಶ್ರೀ ಕೃಷ್ಣನು ಇಲ್ಲಿಗೆ ಆಗಮಿಸಿ ನುಡಿಸುತ್ತಿದ್ದ ಕೊಳಲು ಇಲ್ಲಿ ಬಿಟ್ಟು ಹೋಗಿದ್ದ ಎಂಬ ಜನಪದೀಯ ನಂಬಿಕೆಯಿಂದ ವರ್ಷಕ್ಕೊಮ್ಮೆ ಇಲ್ಲಿರುವ ಶ್ರೀಕೃಷ್ಣನ ಕೊಳಲನ್ನು ಭಕ್ತಿಪೂರ್ವಕವಾಗಿ ಗರ್ಭಗುಡಿಯಿಂದ ತೆಗೆದು ವಿವಿಧ ವಿಧಿ ವಿಧಾನಗಳೊಂದಿಗೆ ಪೂಜೆಗಳನ್ನು ನೆರವೇರಿಸಿ ಮೆರವಣಿಗೆ ನಡೆಸಲಾಗುತ್ತದೆ. ಗೊಲ್ಲ ಸಮುದಾಯದವರು ಮತ್ತು ಗ್ರಾಮದ ಇತರೆ ಜನಾಂಗದವರು ಒಗ್ಗೂಡಿ ಸಂಪ್ರದಾಯದಂತೆ ಹಬ್ಬ ಆಚರಿಸುತ್ತಾರೆ. ಚೆಂಗಂಡ ಮತ್ತು ಬಿದ್ದಂಡ ಕುಟುಂಬಸ್ಥರು ಇಲ್ಲಿನ ಪ್ರಮುಖ ಕುಟುಂಬಗಳಾಗಿದ್ದು ಈ ವರ್ಷ ನಿವೃತ್ತ ಯೋಧ ಚೆಂಗಂಡ ಶಿವಾಜಿ ಶ್ರೀಕೃಷ್ಣನ ಕೊಳಲನ್ನು ಹಿಡಿದು ಮೆರವಣಿಗೆ ನಡೆಸಿದರು. ಊರಿನ ಮಂದಿ ಮೆರವಣಿಗೆಯಲ್ಲಿ ಹೆಜ್ಜೆ ಹಾಕಿ ನಂತರ ಅಶ್ವತ್ಥ ಮರದ ಬಳಿ ಶ್ರೀಕೃಷ್ಣನ್ನು ಪೂಜಿಸುತ್ತಾರೆ. ಬಿಳಿ ಸೀರೆ ಧರಿಸಿದ ಹದಿನಾರು ಕುಟುಂಬದ ಮಹಿಳೆಯರು ಚೆಂಬುಚೆರ್ಕ್ ಎಂಬ ಆಚರಣೆಯಲ್ಲಿ ಪಾಲ್ಗೊಳ್ಳುತ್ತಾರೆ. ಚೆನ್ನತಪ್ಪ ಶ್ರೀ ಕೃಷ್ಣ ದೇವಸ್ಥಾನದಲ್ಲಿ ಗೊಲ್ಲ ಸಮುದಾಯದವರು ಪೂಜೆಗಳನ್ನು ನೆರವೇರಿಸುವ ವಿಶೇಷ ಪದ್ದತಿಯಿದ್ದು ಹಿಂದಿನ ಸಂಪ್ರದಾಯ ಮತ್ತು ಆಚರಣಾ ಪದ್ದತಿಗಳಿಗೆ ಯಾವುದೇ ಧಕ್ಕೆ ಬಾರದಂತೆ ಪೂಜಾ ವಿಧಾನಗಳನ್ನು ನೆರವೇರಿಸುತ್ತಾ ಬರುತ್ತಿರುವುದು ವಿಶೇಷವಾಗಿದೆ.

—ಸಿ.ಎಸ್.ಸುರೇಶ್, ನಾಪೊಕ್ಲು





# ರಂಗೋಲಿ ಕಲ್ಲು

ಇದು ರಂಗೋಲಿ ಕಲ್ಲು. ಇದನ್ನು ಕುಟ್ಟಿ ಪುಡಿ ಮಾಡಿ ಬೀಸುವ ಕಲ್ಲಲ್ಲಿ ಹಾಕಿ ಇನ್ನೂ ಸಣ್ಣಗೆ ಪುಡಿ ಮಾಡಿದರೆ ರಂಗೋಲಿ ಪುಡಿ ಸಿದ್ಧ. ಹಳ್ಳಿಗಳಲ್ಲಿ ಇನ್ನೂ ಇಂತಹ ಕಲ್ಲುಗಳಿಂದಲೇ ರಂಗೋಲಿ ಪುಡಿಯನ್ನು ತಯಾರಿಸುತ್ತಾರೆ. ಇದು ಈಚೆಗೆ, ಮನೆ ಮುಂದಿನ ಹಳೆಯ ಗೋಡೆಯನ್ನು ರಿಪೇರಿ ಮಾಡುವಾಗ ಸಿಕ್ಕಿತು. ಈಗಿನ ಕಾಲಮಾನದಲ್ಲಿ ಕಲಬೆರಕೆಯ ರಂಗೋಲಿ ಪುಡಿ ಸಿಗುತ್ತದೆ. ಜೊತೆಗೆ ಮನೆಯ ಮುಂದೆ ರಂಗೋಲಿಗಳೂ ಕಾಣೆಯಾಗುತ್ತಿವೆ. ಮನೆಯ ಮುಂದೆ ದನದ ಸಗಣಿಯಿಂದ ನೆಲವನ್ನು ಸಾರಿಸಿ ರಂಗೋಲಿ ಇಟ್ಟರೆ ಮನೆಗೇ ಕಳೆ.

—ನರಸಿಂಹರೆಡ್ಡಿ, ಸೇಡಂ

